ಆ) 1996-97ನೇ ಸಾಲಿನಲ್ಲಿ ಎಷ್ಟು ಲಕ್ಷದ ರಸ್ತೆ ಕಾಮಗಾರಿಯನ್ನು ನಿಗದಿಪಡಿಸಲಾಗುವುದು?

**ಶ್ರೀ ಹೆಚ್. ನಾಗಪ್ಪ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು):-**

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜನವರಿ 1996ರಿಂದ ಮಾರ್ಚ್ 31ರ ಅವಧಿಯಲ್ಲಿ ಸಂಪರ್ಕ ರಸ್ತೆಗಳನ್ನು ನಿರ್ಮಾಣ ಮಾಡಿರುವುದಿಲ್ಲ.

ಆ) 1995-96ನೇ ಸಾಲಿನಲ್ಲಿ ಪ್ರಾರಂಭಿಸಿರುವ ರಸ್ತೆಗಳ ಕಾಮಗಾರಿಗಳು ಪೂರ್ಣಗೊಂಡ ನಂತರ 1996-97ನೇ ಸಾಲಿಗೆ ಸಂಬಂಧಿಸಿದ ರಸ್ತೆಗಳ ಕಾಮಗಾರಿಗಳನ್ನು ತೆಗೆದುಕೊಳ್ಳಲು ಕ್ರಮ ಕೈಗೊಳ್ಳಲಾಗುವುದು.

**ವಿಷಯ:- ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭೂ ಸುಧಾರಣಾ ಕಾಯ್ದೆಯಿಂದ ತೊಂದರೆಗೊಳಗಾದ ಭೂ ಮಾಲೀಕರಿಗೆ ಪರಿಹಾರ.**

1158 (1682) ಯು.ಆರ್. ಸಭಾಪತಿ (ಉಡುಪಿ):- ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭೂ ಸುಧಾರಣಾ ಕಾಯ್ದೆಯಿಂದ ತೊಂದರೆಗೊಳಗಾದ ಭೂ ಮಾಲೀಕರಿಗೆ ನೀಡಲಾಗಿರುವ ಮತ್ತು ನೀಡಬೇಕಾಗಿರುವ ಪರಿಹಾರ ಧನ ಎಷ್ಟು? (ವಿವರ ನೀಡುವುದು);

ಆ) ಸದರಿಯವರಿಗೆ ಪರಿಹಾರ ಧನ ವಿತರಿಸುವ ಬಗ್ಗೆ ಸರ್ಕಾರದವರು ಕೂಡಲೇ ಕ್ರಮ ತೆಗೆದುಕೊಳ್ಳುವರೇ? (ವಿವರ ನೀಡುವುದು).

**ಶ್ರೀ ರಮೇಶ್ ಸಿ. ಜಿಗಜಿಣಗಿ (ಕಂದಾಯ ಸಚಿವರು):-**

ಅ) ನಗದಾಗಿ ನೀಡಿರುವ ಪರಿಹಾರ

| ಎನ್‌ಎಸ್‌ಸಿ ಮೂಲಕ | ಬಡ್ಡಿ ಪಾವತಿ |
|---|---|
| ರೂ. | ರೂ. |
| 9,96,03,666 | 2,32,73,662 | 59,66,052 |

ಒಟ್ಟು ರೂ. 12,88,43,380-00

ನೀಡಬೇಕಾದ ಪರಿಹಾರ : ಪ್ರಸ್ತುತ ನಿಗದಿಪಡಿಸಿದಂತೆ ಈ ಕೆಳಗಿನಂತೆ ಪರಿಹಾರ ಪಾವತಿಗೆ ಬಾಕಿ ಇರುವುದು.

| ನಗದು ರೂಪದಲ್ಲಿ | ಎಸ್. ಎಸ್. ಸಿ ಮೂಲಕ |
|---|---|
| ರೂ. 267 ಲಕ್ಷ | ರೂ. 72 ಲಕ್ಷ |

ಆ) ಹೌದು, ಈಗ ಹಾಲಿ 7 ತಾಲ್ಲೂಕುಗಳಿಂದ 38 ಪ್ರಕರಣಗಳಲ್ಲಿ ಪರಿಹಾರ ಸಂದಾಯಕ್ಕಾಗಿ ಅರ್ಜಿಗಳು ಬಂದಿದ್ದು, ಅವು ಪರಿಶೀಲನಾ ಹಂತದಲ್ಲಿವೆ.

ಮಾಜಿ ಭೂ ಮಾಲೀಕರ ವಿಳಾಸ ಲಭ್ಯವಿಲ್ಲದೇ ಇರುವುದು ಸಲ್ಲತಕ್ಕ ಪರಿಹಾರ ಕಡಿಮೆ ಮೊತ್ತವಾಗಿದ್ದು, ಇದನ್ನು ಪಡೆಯಲು ನಮೂನೆ 9 'ಸಿ' ನಲ್ಲಿ ಅರ್ಜಿ ಸಲ್ಲಿಸದೇ ಇರುವುದು, ಮೃತಪಟ್ಟ ಭೂ